**ಅಸಲು ದಾವಾ ನಂಃ30/2023**
**ಪಿ.ಡಬ್ಲ್ಯೂಃ01**

**ದಿನಾಂಕಃ17–09–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಡಿ ಜೆ ಆರ್ .,1, 2, 4, 5 ಮತ್ತು 8 ನೇ ಪ್ರತಿವಾದಿ ಪರ ವಕೀಲರಿಂದ**

ನಮ್ಮ ವಂಶವೃಕ್ಷಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಗಂಡನಊರು ಚಳ್ಳಕೆರೆ. ನಾನು ವೀರದಿಮ್ಮನಹಳ್ಳಿಯಲ್ಲಿ ವಾಸ ಇರುತ್ತೇನೆ. ನನ್ನ ವಾಸದ ದೃಡೀಕರಣಕ್ಕೆ ಸಂಬಂಧಿಸಿದಂತೆ ಅಥವಾ ನನ್ನ ಗುರುತಿಗೆ ಸಂಬಂಧಿಸಿದಂತೆ ಆಧಾರ ಗುರುತಿನ ಚೀಟಿ ಅಥವಾ ಚುನಾವಣಾ ಗುರುತಿನ ಚೀಟಿ ಅಥವಾ ಇನ್ನಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

2. 1 ನೇ ಪ್ರತಿವಾದಿಗೆ 3 ಜನ ಮಕ್ಕಳಿದ್ದು, ದಾವಾ ಪತ್ರದಲ್ಲಿ ವಿವರಿಸಿರುವ ವಂಶಾವಳಿಯಲ್ಲಿ ಸದರಿ ವಿಚಾರ ನಮೂದು ಇಲ್ಲ ಎಂದರೆ ಸರಿ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿ. ಆ ಕಾರಣದಿಂದ 1 ನೇ ಪ್ರತಿವಾದಿ ಹೆಂಡತಿ ಮತ್ತು ಮಕ್ಕಳಿಗೂ ದಾವಾ ಸ್ವತ್ತಿನಲ್ಲಿ ಭಾಗಾಂಶದ ಹಕ್ಕು ಇದೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿ ಸೋನಾಬಾಯಿ ಆಗಿದ್ದು, ಅವರಿಗೆ ರಾಜು, ಯಮುನಾರಾಜ, ಬಾಬುನಾಯ್ಕು ಮತ್ತು ಲಕ್ಷ್ಮೀಬಾಯಿ ಎಂಬ 4 ಜನ ಮಕ್ಕಳು ಎಂದರೆ ಸರಿ. ಬಾಬುನಾಯ್ಕು ಪೌತಿಯಾಗಿದ್ದು, ಅವರ ಹೆಂಡತಿ ನಾಗಮ್ಮ ಎಂದರೆ ಸರಿ. ಸದರಿಯವರಿಗೆ ರಾಜೇಶನಾಯ್ಕು, ದೀಪಿಕಾ ಮತ್ತು ರಾಧಿಕಾ ಎಂಬ 3 ಜನ ಮಕ್ಕಳು ಎಂದರೆ ಸರಿ. ಸದರಿ ದಾವೆಯಲ್ಲಿ ರಾಜು, ಯಮುನಾರಾಜ, ಬಾಬುನಾಯ್ಕು ಮತ್ತು ಲಕ್ಷ್ಮೀಬಾಯಿ ಮತ್ತು ಬಾಬುನಾಯ್ಕು ಅವರ ಹೆಂಡತಿ ಮತ್ತು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಹೆಂಡತಿ ರೂಪಾಬಾಯಿ ಎಂದರೆ ಸರಿ. ಸದರಿಯವರಿಗೆ ಗಂಗಮ್ಮ, ಸೋಮಲಾನಾಯ್ಕು, ಸುರೇಶ, ಶಿವಕುಮಾರನಾಯ್ಕು ಎಂಬ ಮಕ್ಕಳು ಎಂದರೆ ಸರಿ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ 3 ನೇ ಪ್ರತಿವಾದಿ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿ.

3. ದಾವಾ ಸ್ವತ್ತಿನಲ್ಲಿ 2 ನೇ ಪ್ರತಿವಾದಿಯ ಮಕ್ಕಳಿಗೂ ಭಾಗಾಂಶದ ಹಕ್ಕು ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 1 ಮತ್ತು 2 ನೇ ಪ್ರತಿವಾದಿಯ ಮಕ್ಕಳಿಗೂ ಸಹ ಭಾಗಾಂಶದ ಹಕ್ಕು ಇರುವುದರಿಂದ ಸದರಿ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡದೆ ಇರುವ ಕಾರಣ ಸದರಿ ದಾವೆ ಕಾನೂನಿನ ಪ್ರಕಾರ ಊರ್ಜಿತವಾಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯ ಮಕ್ಕಳನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸದರಿ ದಾವೆಯನ್ನು 4 ಜಮೀನಿನ ಸಂಬಂಧ ಹೂಡಲಾಗಿದೆ. ದಾವಾ ಐಟಂ ನಂ.1 ರಿಂದ 4 ರ ಸ್ವತ್ತು

ಮೂಲತಃ ಯಾರಿಗೆ ಸೇರಿದ್ದು ಮತ್ತು ನಮಗೆ ಹೇಗೆ ಹಕ್ಕು ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ರ ಸ್ವತ್ತನ್ನು 1 ರಿಂದ 7 ನೇ ಪ್ರತಿವಾದಿಗಳು ಹಾಗೂ 1 ಮತ್ತು 2 ನೇ ಪ್ರತಿವಾದಿ ಮಕ್ಕಳು ಸೇರಿಕೊಂಡು ಒಟ್ಟು 25 ಜನ 8 ನೇ ಪ್ರತಿವಾದಿಗೆ ನನ್ನನ್ನು ಹೊರುಪಡಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.1, 3 ಮತ್ತು 4 ರ ಜಮೀನುಗಳು ಫಲವತ್ತಾದ ಜಮೀನುಗಳು ಆಗಿದ್ದು, ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದೆ ಎಂದರೆ ಸರಿ. ದಾವಾ ಐಟಂ ನಂ.2 ರ ಸ್ವತ್ತನ್ನು 1 ರಿಂದ 7 ನೇ ಪ್ರತಿವಾದಿಗಳು ಹಾಗೂ 1 ಮತ್ತು 2 ನೇ ಪ್ರತಿವಾದಿ ಮಕ್ಕಳು ಸೇರಿಕೊಂಡು ಒಟ್ಟು 25 ಜನ 8 ನೇ ಪ್ರತಿವಾದಿಗೆ ನನ್ನನ್ನು ಹೊರುಪಡಿಸಿ ಮಾರಾಟ ಮಾಡಿದ್ದು ಸ್ವಾಧೀನವನ್ನು ಸಹ 8 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. 8 ನೇ ಪ್ರತಿವಾದಿ ದಾವಾ ಐಟಂ ನಂ.2 ರ ಸ್ವತ್ತಿಗೆ ಹಕ್ಕುದಾರರು ಮತ್ತು ಸ್ವಾಧೀನದಾರರು ಎಂದರೆ ಸರಿ.

4. ದಿಃ23-11-2022 ನೇ ಸಾಲಿನಲ್ಲಿ ದಾವಾ ಐಟಂ ನಂ.2 ರ ಸ್ವತ್ತಿಗೆ ಸಂಬಂಧಿಸಿದಂತೆ 8 ನೇ ಪ್ರತಿವಾದಿಗೆ ಕ್ರಯಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರ ಆಗುವ 2-3 ತಿಂಗಳ ಪೂರ್ವದಿಂದಲೂ ಕ್ರಯದ ಬಗ್ಗೆ ವ್ಯವಹಾರ ಆಗುತ್ತಿತ್ತು ಎಂದರೆ ಸರಿ. ಮಾರಾಟ ಮಾಡುವ ಕಾಲಕ್ಕೆ ನನ್ನ ಆಧಾರ ಗುರುತಿನ ಚೀಟಿಯನ್ನು ಸಹ ಪ್ರತಿವಾದಿಗಳು ನನ್ನಿಂದ ಪಡೆದಿರುತ್ತಾರೆ. ಸದರಿ ಕ್ರಯ ಆದ ನಂತರ ಕ್ರಯದಿಂದ ಬಂದಂತಹ ಹಣವನ್ನು ಹಂಚಿಕೆ ಮಾಡುವ ವಿಷಯದಲ್ಲಿ ವ್ಯತ್ಯಾಸ ಅಥವಾ ವೈಮನಸ್ಸು ಬಂದಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.1, 3 ಮತ್ತು 4 ರ ಆಸ್ತಿಗಳಲ್ಲಿ ನನಗೆ ಭಾಗಾಂಶ ಬೇಡ ಆದರೆ ದಾವಾ ಐಟಂ ನಂ.2 ರ ಸ್ವತ್ತನ್ನು ಮಾರಾಟ ಮಾಡಿದ ಸಂಪೂರ್ಣ ಬೇಕು ಎಂದು ನಾನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಕ್ರಯದಿಂದ ಬಂದ ಹಣವನ್ನು 1 ರಿಂದ 3 ನೇ ಪ್ರತಿವಾದಿಯ ಮಕ್ಕಳೆಲ್ಲರು ಹಂಚಿಕೊಂಡು ನನಗೂ ಸಹ ಉಳಿದ ಸಮಪಾಲನ್ನು ಕೊಡುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಸ್ವತ್ತನ್ನು ಮಾರಾಟ ಮಾಡಿದ ಪೂರಾ ಹಣ ನೀಡಿಲ್ಲ ಎಂಬ ಕಾರಣದಿಂದ ನಾನು ಸದರಿ ಕ್ರಯಪತ್ರಕ್ಕೆ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ದಾವಾ ಐಟಂ ನಂ.2 ರ ಸ್ವತ್ತನ್ನು ಮಾರಾಟ ಮಾಡುವ ಸಂಬಂಧ ಆದ ಮಾತುಕತೆ ಸಮಯದಲ್ಲಿ ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾ ಹೂಡುವುದರಿಂದ ಹೆದರಿ ಹೆಚ್ಚಿನ ಹಣವನ್ನು ನನಗೆ ನೀಡುತ್ತಾರೆ ಎಂಬ ದುರುದ್ದೇಶದಿಂದ ಈ ದಾವೆಯನ್ನು ಹೂಡಲಾಗಿದೆ ಎಂದರೆ ಸರಿಯಲ್ಲ.

5. 8 ನೇ ಪ್ರತಿವಾದಿ ದಾವಾ ಐಟಂ ನಂ.2 ರ ಸ್ವತ್ತನ್ನು ಖರೀದಿಸಿದ ನಂತರ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಸದರಿ ಸ್ವತ್ತನ್ನು ಅಭಿವೃದ್ಧಿ ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರ ಆದ ನಂತರ ದಾವಾ ಐಟಂ ನಂ.2 ರ ಸ್ವತ್ತನ್ನು ನಾನು ನೋಡಿಲ್ಲ. 8 ನೇ ಪ್ರತಿವಾದಿಗೆ

ದಾವಾ ಐಟಂ ನಂ.2 ರ ಸ್ವತ್ತನ್ನು ಮಾರಾಟ ಮಾಡಿರುವುದರಿಂದ ದಾವಾ ಐಟಂ ನಂ.1, 3 ಮತ್ತು 4 ರಲ್ಲಿ ದಾವಾ ಐಟಂ ನಂ.2 ರ ಸ್ವತ್ತಿನ ಭಾಗವನ್ನು ಒಳಗೊಂಡು ನನಗೆ ಭಾಗ ನೀಡಿದರೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಸ್ವತ್ತಿನಲ್ಲಿ ನನಗೆ ಭಾಗಾಂಶ ಇಲ್ಲದಿರುವುದು ತಿಳಿದಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ.

**(3, 6 ಮತ್ತು 7 ಪ್ರತಿವಾದಿಗಳು ಏಕತರ್ಪೆ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.